ಅದು ಹೊಸ ನಗರವನ್ನು ಕಟ್ಟಲು ಹೇಳಿ ಮಾಡಿಸಿದ ಸ್ಥಳ. ನದಿ ದಂಡೆಯ ಮೇಲೆ ಜಗತ್ತು ಪ್ರಾರಂಭವಾದಾಗಿನಿಂದ ಇದ್ದ ಘನ ಅರಣ್ಯದ ಒಂದು ಭಾಗವನ್ನು ಕಡಿದು ನೆಲವನ್ನು ಖಾಲಿ ಮಾಡುವ ಕೆಲಸವಷ್ಟೇ ಬಾಕಿ ಉಳಿದಿತ್ತು. ಸಮುದ್ರದಿಂದ ನಾಲ್ಕು ಮೈಲಿ ದೂರ ಕೆಂಪು ನದಿಯ ದಂಡೆಯ ಮೇಲೆ ಸುಂದರವಾದ ಬಂದರಿನ ಹತ್ತಿರ ಅರಣ್ಯಾವೃತ ಬೆಟ್ಟಗಳ ನಡುವೆ ನಗರವೊಂದು ಮೈದಾಳಲಿತ್ತು.

ವಾಷಿಂಗ್ಟನ್ ಸರ್ಕಾರ ಒಪ್ಪಿಗೆ ನೀಡಿದ ಕೂಡಲೇ ಬಡಗಿಗಳು, ಮರ ಕಡಿಯುವವರು ಕೆಲಸವನ್ನಾರಂಭಿಸಿದರು. ಆದರೆ, ಅಂತಹ ಅರಣ್ಯವನ್ನು ನೀವೆಲ್ಲಿಯೂ ನೋಡಿರಲಿಕ್ಕಿಲ್ಲ. ನೆಲ ಮುಟ್ಟುವಂತೆ ಜೋತು ಬಿದ್ದ ಬಳ್ಳಿಗಳ ಬೇರುಗಳನ್ನು ಒಂದು ತುದಿಯಲ್ಲಿ ಕಡಿದ ಕೂಡಲೇ ಮತ್ತೊಂದು ತುದಿಯಲ್ಲಿ ಚಿಗಿಯುತ್ತಿದ್ದವು. ಮರಳಿ ಮರಳಿ ಗಾಯದಿಂದಲೇ ಶಕ್ತಿ ಪಡೆಯುತ್ತ ಪ್ರತಿಯೊಂದು ಹೊಡೆತ ಬಿದ್ದಾಗಲೂ ಹೊಸದಾದ ಎಲೆ, ಮೊಗ್ಗು, ಕುಡಿ ಬಿಡುತ್ತಿದ್ದವು. ನಗರ ಯೋಜಕರು ದಾರಿ ಚೌಕಗಳನ್ನು ಸಿದ್ಧಪಡಿಸುವಷ್ಟರಲ್ಲಿಯೇ ಅವೆಲ್ಲ ಸಸ್ಯಾವೃತವಾದವು. ಗೋಡೆಗಳು ಮರಗಳಿಗಿಂತ ನಿಧಾನವಾಗಿ ಬೆಳೆದವು. ಅವು ಸ್ವಲ್ಪವಾಗಿ ಏರಿದ ಕೂಡಲೇ ಜೀವಂತ ಬೇರುಗಳ ಬಲ ಹೆಚ್ಚಾಗಿ ಉದುರಿ ಬೀಳತೊಡಗಿದವು.



ಕೊಡಲಿ, ಕೈಕೊಡಲಿಗಳನ್ನು ಮೊಂಡು ಮಾಡಿದ ಈ ಪ್ರತಿರೋಧದಿಂದ ಹೊರಬರಲು ನಗರ ಯೋಜಕರು ಅನಿವಾರ್ಯವಾಗಿ ಬೆಂಕಿಯನ್ನು ಅವಲಂಬಿಸಬೇಕಾಯಿತು. ದಟ್ಟವಾದ ಉಸಿರುಗಟ್ಟಿಸುವ ಹೊಗೆ ಪೊದೆಗಳ ಗುಂಪನ್ನು ಆವರಿಸಿತು. ಎತ್ತರವಾದ ಮರಗಳು ಮೇಣಬತ್ತಿಯಂತೆ ಉರಿದವು. ಕರಗಿದವು.

ಅರಣ್ಯ ತನ್ನ ಸಸ್ಯಗಳ ಜೀವರಸದ ಹರಿವನ್ನು ಹೆಚ್ಚಿಸುವ ಮೂಲಕ ಮತ್ತು ಇಳಿಬಿದ್ದ ಎಲೆಗಳ ಆರ್ದ್ರತೆಯ ಮೂಲಕ ಬೆಂಕಿಯನ್ನು ಮಂದಗೊಳಿಸಲು ಹೋರಾಡಿತು. ಆದರೆ, ಅಂತಿಮವಾಗಿ ಚಳಿಗಾಲ ಬಂತು. ಕಪ್ಪಾದ ಮರಗಳ ಬೊಡ್ಡೆಗಳು, ಸುಟ್ಟು ಕರಕಲಾದ ಬೇರುಗಳ ಮೇಲೆ ಹಿಮ ಎರಡನೇ ಸಾವಿನಂತೆ ಎರಗಿತು. ಈಗ ಅವರು ನಗರ ನಿರ್ಮಿಸಬಹುದು. ಬಹಳ ಬೇಗನೆ ಕೆಂಪು ನದಿಯ ದಂಡೆಗುಂಟ ಶಿಕಾಗೊ ನಗರದಂತೆಯೇ ಪೂರ್ತಿಯಾಗಿ ಮರದಿಂದ ಮಾಡಿದ,